ಕನ್ನಡಪ್ರಭ

# ಮಣಿಪಾಲ: 76 ವರ್ಷದ ಮಹಿಳೆ ಅಂಗಾಂಗ ದಾನ

## ಯಕೃತ್ತಿನ ವೈಫಲ್ಯದಿಂದ ಬಳಲುತ್ತಿದ್ದ ರೋಗಿಗೆ ಜೀವದಾನ | ಕುಟುಂಬಿಕರ ಮಾನವೀಯ ನಡೆ

• **ಕನ್ನಡಪ್ರಭವಾರ್ತೆ** ಮಣಿಪಾಲ

ಅಂಗಾಂಗ ದಾನವು ಯುವಜನರಿಗೆ ಮಾತ್ರ ಸೀಮಿತ ಎಂಬ ಸಾಮಾನ್ಯ ಕಲ್ಪನೆಯನ್ನು ಇಲ್ಲಿನ 76 ವರ್ಷದ ಮಹಿಳೆ ಸುಳ್ಳು ಮಾಡಿ, ಬೇರೆಯವರ ಸಾವಿನ ಬಳಿಕವೂ ಇತರರ ಜೀವ ಉಳಿಸಲು ವಯಸ್ಸು ಅಡ್ಡಿಯಲ್ಲ ಎಂಬ ಸ್ಫೂರ್ತಿದಾಯಕ ಸಂದೇಶ ಸಾರಿದ್ದಾರೆ. ಗಂಗೊಳ್ಳಿಯ ನಿವಾಸಿ ಜೆನ್ನಿ ಡಿಸೋಜಾ (76) ಇಲ್ಲಿನ ಕಸ್ತೂರ್ಬಾ ಆಸ್ಪತ್ರೆಯಲ್ಲಿ ನಿಧನರಾಗಿದ್ದು, ಅವರ ಕುಟುಂಬವು ಅವರ ಅಂಗಾಂಗ ದಾನ ಮಾಡಿದೆ.

ಜೆನ್ನಿ ಹಠಾತ್ ತಲೆಸುತ್ತು ಕಾಣಿಸಿಕೊಂಡು ಕೆಲವೇ ಗಂಟೆಗಳಲ್ಲಿ ಅವರು ಪ್ರಜ್ಞಾಹೀನರಾಗಿ ತುರ್ತಾಗಿ ಕಸ್ತೂರ್ಬಾ ಆಸ್ಪತ್ರೆಗೆದಾಖಲಿಸಲ್ಪಟ್ಟಿದ್ದರು. ವೈದ್ಯಕೀಯ ಪರೀಕ್ಷೆಗಳಲ್ಲಿ ಅವರಿಗೆ ಮೆದುಳಿನಲ್ಲಿ ತೀವ್ರ ರಕ್ತಸ್ರಾವ ಆಗಿದ್ದು, ಅವರನ್ನು ಉಳಿಸಲು ವೈದ್ಯರು ನಡೆಸಿದ ಚಿಕಿತ್ಸಾ ಪ್ರಯತ್ನಗಳು ಫಲಕಾರಿಯಾಗಲಿಲ್ಲ. ಶಿಷ್ಟಾಚಾರಗಳ ನಂತರ ಅವರನ್ನು ಮೆದುಳು ನಿಷ್ಕ್ರಿಯಗೊಂಡ ರೋಗಿ ಎಂದು ಘೋಷಿಸಲಾಯಿತು.

ದುಃಖದ ನಡುವೆಯೂ ಅವರ ಕುಟುಂಬವು ವೈದ್ಯರ ಸಲಹೆ ಮೇರೆಗೆ ಮಾನವೀಯ ನಿರ್ಧಾರ ಕೈಗೊಂಡಿತು. ಈ ಮಹತ್ತರ ನಿರ್ಧಾರದ ಫಲವಾಗಿ, ಅವರ ಯಕೃತ್ತು (ಲಿವರ್)ಅನ್ನು ಯಕೃತ್ತಿನ ವೈಫಲ್ಯದಿಂದ ಬಳಲುತ್ತಿದ್ದ ರೋಗಿಯೊಬ್ಬರಿಗೆ ಅಳವಡಿಸಿ ಅವರ ಹೊಸ ಬದುಕಿನ ಕಾರಣವಾಯಿತು. ಅವರ ನೇತ್ರಗಳು ದೃಷ್ಟಿಹೀನರಿಗೆ ಬೆಳಕನ್ನು ನೀಡಲಿದ್ದು, ಚರ್ಮವು ಸುಟ್ಟ ಗಾಯಗಳಿಂದ ಬಳಲುತ್ತಿರುವ ರೋಗಿಗಳ ಚಿಕಿತ್ಸೆಗೆ ನೆರವಾಗಲಿದೆ.

ಈ ಬಗ್ಗೆ ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳ ಮುಖ್ಯ ನಿರ್ವಹಣಾಧಿಕಾರಿ ಡಾ. ಸುಧಾಕರ್‌ಕಂಟಿಪುಡಿ, ನಾವು ಸಾಮಾನ್ಯವಾಗಿ ಅಂಗಾಂಗ ದಾನವನ್ನು ಯುವಜನರಿಗೆ ಮೀಸಲಾದದ್ದು ಎಂದು ಭಾವಿಸುತ್ತೇವೆ. ತಮ್ಮ 76 ವರ್ಷದ ಪ್ರೀತಿಪಾತ್ರರ ಅಂಗಾಂಗಗಳನ್ನು ದಾನ ಮಾಡುವ ಮೂಲಕ ಈ ಕುಟುಂಬವು ನಮಗೆ ಮಾದರಿಯಾಗಿದೆ. ಅವರ ಈ ನಿರ್ಧಾರವು ಇನ್ನೂ ನೂರಾರು ಕುಟುಂಬಗಳಿಗೆ ಪ್ರೇರಣೆಯಾಗಲಿದೆ ಎಂದು ಹೇಳಿದ್ದಾರೆ.

- ಅಂಗಾಂಗ ದಾನವು ಯುವಜನರಿಗೆ ಮಾತ್ರ ಸೀಮಿತ ಎಂಬ ಸಾಮಾನ್ಯ ಕಲ್ಪನೆಯನ್ನು ಇಲ್ಲಿನ 76 ವರ್ಷದ ಮಹಿಳೆ ಸುಳ್ಳು ಮಾಡಿ, ಬೇರೆಯವರ ಸಾವಿನ ಬಳಿಕವೂ ಇತರರ ಜೀವ ಉಳಿಸಲು ವಯಸ್ಸು ಅಡ್ಡಿಯಲ್ಲ ಎಂಬ ಸ್ಫೂರ್ತಿದಾಯಕ ಸಂದೇಶ ಸಾರಿದ್ದಾರೆ. ಗಂಗೊಳ್ಳಿಯ ನಿವಾಸಿ ಜೆನ್ನಿ ಡಿಸೋಜಾ (76) ಇಲ್ಲಿನ ಕಸ್ತೂರ್ಬಾ ಆಸ್ಪತ್ರೆಯಲ್ಲಿ ನಿಧನರಾಗಿದ್ದು, ಅವರ ಕುಟುಂಬವು ಅವರ ಅಂಗಾಂಗ ದಾನ ಮಾಡಿದೆ.

8-7-2026
UDAYAVANI - MANIPAL

# ಕಸ್ತೂರ್ಬಾ ಆಸ್ಪತ್ರೆ: 76ರ ಮಹಿಳೆಯ ಅಂಗಾಂಗ ದಾನ

**ಮಣಿಪಾಲ, ಜು. 7:** ಯುವಜನರು ಮೃತಪಟ್ಟಾಗ ಅಂಗಾಂಗ ದಾನ ಮಾಡುವುದು ಇತ್ತೀಚಿನ ವರ್ಷಗಳಲ್ಲಿ ಸಾಮಾನ್ಯವಾಗುತ್ತಿದೆ. ಆದರೆ ಇಲ್ಲೊಬ್ಬ 76 ವರ್ಷದ ವೃದ್ಧೆಯ ಅಂಗಾಂಗಳನ್ನೂ ದಾನ ಮಾಡುವ ಮೂಲಕ ಅನ್ಯರ ಜೀವ ಉಳಿಸಲು ವಯಸ್ಸು ಅಡ್ಡಿಯಲ್ಲ ಎಂಬ ಸ್ಫೂರ್ತಿದಾಯಕ ಸಂದೇಶ ಸಾರಲಾಗಿದೆ.

ಗಂಗೊಳ್ಳಿಯ 76 ವರ್ಷದ ಜೆನ್ನಿ ಡಿ'ಸೋಜಾ ಅವರು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ನಿಧನರಾದ ಬಳಿಕ, ಅವರ ಕುಟುಂಬವು ಮಾದರಿಯಾದ ನಿರ್ಧಾರ ಕೈಗೊಂಡು ಅವರ ಅಂಗಾಂಗಗಳನ್ನು ದಾನ ಮಾಡಲು ಒಪ್ಪಿಗೆ ನೀಡಿತು.

ಅನಾರೋಗ್ಯದ ಹಿನ್ನೆಲೆಯಲ್ಲಿ ವೃದ್ಧೆಯನ್ನು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಗೆ ದಾಖಲಿಸಲಾಯಿತು. ವೈದ್ಯಕೀಯ ಪರೀಕ್ಷೆಗಳಲ್ಲಿ ಅವರಿಗೆ ಮೆದುಳಿನಲ್ಲಿ ತೀವ್ರ ರಕ್ತಸ್ರಾವ ಆಗಿರುವುದು ದೃಢಪಟ್ಟಿತು. ವೈದ್ಯರ ತಂಡವು ಅವರನ್ನು ಉಳಿಸಲು ಎಲ್ಲ ರೀತಿಯ ಚಿಕಿತ್ಸೆ ಪ್ರಯತ್ನಗಳನ್ನು ನಡೆಸಿದರೂ ಫಲಕಾರಿಯಾಗಲಿಲ್ಲ. ಎಲ್ಲ ಪರೀಕ್ಷೆಗಳ ಬಳಿಕ, ಅವರನ್ನು ಮೆದುಳು ನಿಷ್ಕ್ರಿಯಗೊಂಡ ರೋಗಿ ಎಂದು ಅಧಿಕೃತವಾಗಿ ಪ್ರಮಾಣೀಕರಿಸಲಾಯಿತು. ಕುಟುಂಬ ಅವರ ಅಂಗಾಂಗ ದಾನಕ್ಕೆ ಒಪ್ಪಿಗೆ ಸೂಚಿಸಿತು. ಯಕೃತ್ತಿನ ವೈಫಲ್ಯದಿಂದ ಬಳಲುತ್ತಿದ್ದ ರೋಗಿಯೊಬ್ಬರಿಗೆ ವೃದ್ಧೆಯ ಯಕೃತ್ತು ಹೊಸ ಬದುಕು ನೀಡಿತು. ನೇತ್ರಗಳು ದೃಷ್ಟಿಹೀನರಿಗೆ ಬೆಳಕನ್ನು ನೀಡಲಿದ್ದು, ಚರ್ಮವು ಸುಟ್ಟ ಗಾಯಗಳಿಂದ ಬಳಲುತ್ತಿರುವ ರೋಗಿಗಳ ಚಿಕಿತ್ಸೆಗೆ ನೆರವಾಗಲಿದೆ.

## ದುಃಖದ ನಡುವೆಯೂ ಅಂಗಾಂಗ ದಾನ

ಸಾಮಾನ್ಯವಾಗಿ ಅಂಗಾಂಗ ದಾನವನ್ನು ಯುವಜನರಿಗೆ ಮೀಸಲಾದದ್ದು ಎಂದು ಭಾವಿಸುತ್ತೇವೆ. 76 ವರ್ಷ ಮಹಿಳೆಯ ಅಂಗಾಂಗ ದಾನದ ಮೂಲಕ ಕುಟುಂಬವೊಂದು ಮಾದರಿಯಾಗಿದೆ.

–ಡಾ| ಸುಧಾಕರ್ ಕಂಟಿಪುಡಿ,
ಸಿಒಒ, ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳು

ವಿಜಯವಾಣಿ

ಬುಧವಾರ 8 ಜುಲೈ 2026

# 76ರ ಹರೆಯದ ವೃದ್ಧೆ ಅಂಗಾಂಗ ದಾನ

■ ಯಕೃತ್ತು, ನೇತ್ರ, ಚರ್ಮ ದಾನ ಮಾಡಿದ ಕುಟುಂಬಸ್ಥರು

■ ಮೂವರಿಗೆ ಮರುಜೀವ

**ಉಡುಪಿ:** ಅಂಗಾಂಗ ದಾನ ಯುವಜನರಿಗೆ ಮಾತ್ರ ಸೀಮಿತ ಎಂಬ ತಪ್ಪು ಕಲ್ಪನೆಯನ್ನು ಕರಾವಳಿಯ 76 ವರ್ಷದ ವೃದ್ಧೆಯೊಬ್ಬರು ಸುಳ್ಳು ಎಂದು ಸಾಬೀತುಪಡಿಸಿದ್ದಾರೆ. ಗಂಗೊಳ್ಳಿ ನಿವಾಸಿ ಜೆನ್ನಿ ಡಿಸೋಜ(76) ಅಂಗಾಂಗ ದಾನದ ಮೂಲಕ ಮೂವರ ಬಾಳಿಗೆ ಆಶಾಕಿರಣವಾಗಿದ್ದಾರೆ.

ಜೆನ್ನಿ ಡಿಸೋಜ ಅವರಿಗೆ ಇತ್ತೀಚೆಗೆ ಹಠಾತ್ ತಲೆಸುತ್ತು ಕಾಣಿಸಿಕೊಂಡು ಪ್ರಜ್ಞಾಹೀನರಾಗಿದ್ದರು. ತಕ್ಷಣ ಅವರನ್ನು ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಪರೀಕ್ಷಿಸಿದ ವೈದ್ಯರು ಮಿದುಳಿನಲ್ಲಿ ತೀವ್ರ ರಕ್ತಸ್ರಾವವಾಗಿದ್ದು, ಮಿದುಳು ನಿಷ್ಕ್ರಿಯ ಎಂದು ಘೋಷಿಸಿದರು. ದುಃಖದ ನಡುವೆಯೂ ಜೆನ್ನಿ ಡಿಸೋಜ ಕುಟುಂಬಸ್ಥರು ಮಾನವೀಯ ನಿರ್ಧಾರ ಕೈಗೊಂಡಿದ್ದು, ವೈದ್ಯರ ಸಲಹೆ ಮೇರೆಗೆ ಯಕೃತ್ತು, ನೇತ್ರ, ಚರ್ಮದಾನಕ್ಕೆ ಒಪ್ಪಿಗೆ ಸೂಚಿಸಿದರು. ರಾಜ್ಯ ಸರ್ಕಾರದ ಜೀವಸಾರ್ಥಕತೆ ಸಂಸ್ಥೆ ಸಹಯೋಗದೊಂದಿಗೆ ಅಂಗಾಂಗ ದಾನ ಪ್ರಕ್ರಿಯೆ ಯಶಸ್ವಿಯಾಗಿ ನಡೆಯಿತು.

ತೀವ್ರ ಯಕೃತ್ತಿನ ವೈಫಲ್ಯದಿಂದ ಬಳಲುತ್ತಿದ್ದ ರೋಗಿಯೊಬ್ಬರಿಗೆ ಯಶಸ್ವಿಯಾಗಿ ಕಸಿ ಮಾಡಲಾಗಿದೆ. ಕಣ್ಣು ದೃಷ್ಟಿಹೀನ ಇಬ್ಬರ ಬಾಳಿಗೆ ಬೆಳಕಾಗಲಿದೆ. ಸುಟ್ಟ ಗಾಯಗಳಿಂದ ಬಳಲುತ್ತಿರುವ ರೋಗಿಗಳ ತುರ್ತು ಚಿಕಿತ್ಸೆಗೆ ಚರ್ಮ ಬಳಸಿಕೊಳ್ಳಲಾಗುತ್ತದೆ.

**ವಯಸ್ಸಿನ ಮಿತಿಯಿಲ್ಲ:** ಈ ಬಗ್ಗೆ ಮಾಹಿತಿ ನೀಡಿದ ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳ ಮುಖ್ಯ ನಿರ್ವಹಣಾಧಿಕಾರಿ ಡಾ.ಸುಧಾಕರ್ ಕಂಟಿಪುಡಿ, ಸಾಮಾನ್ಯವಾಗಿ ಅಂಗಾಂಗ ದಾನ ಯುವಕರಿಂದ ಮಾತ್ರ ಸಾಧ್ಯ ಎಂದು ಭಾವಿಸುತ್ತೇವೆ. ಆದರೆ 76 ವರ್ಷದ ಮಹಿಳೆಯ ಕುಟುಂಬ ನಮಗೆ ಹೊಸ ಪಾಠ ಕಲಿಸಿದೆ. ಈ ಕುಟುಂಬದ ನಿರ್ಧಾರ ಇತರ ಕುಟುಂಬಗಳಿಗೆ ಪ್ರೇರಣೆಯಾಗಲಿದೆ ಎಂದು ತಿಳಿಸಿದ್ದಾರೆ.

ವಿಜಯ ಕರ್ನಾಟಕ

ಬುಧವಾರ, 8 ಜುಲೈ 2026,

# 76ನೇ ವಯಸ್ಸಿನಲ್ಲಿ ಅಂಗಾಂಗ ದಾನ!

## ಜೀವ ಉಳಿಸಲು ಪ್ರಾಯ ಅಡ್ಡಿಯಲ್ಲ। ಮಹಿಳೆಯಿಂದ ಸಾಬೀತು

**ಉಡುಪಿ:** ಅಂಗಾಂಗ ದಾನ ಯುವ ಜನರಿಗೆ ಮಾತ್ರ ಸೀಮಿತ ಎಂಬುದು ಸಾಮಾನ್ಯ ಕಲ್ಪನೆ. ಆದರೆ ಗಂಗೊಳ್ಳಿಯ 76 ವರ್ಷದ ಮಹಿಳೆ ಯೊಬ್ಬರು ಆ ನಂಬಿಕೆಯನ್ನು ಸುಳ್ಳೆಂದು ಸಾಬೀತುಪಡಿಸಿ, ಜೀವ ಉಳಿಸಲು ವಯಸ್ಸು ಎಂದಿಗೂ ಅಡ್ಡಿಯಲ್ಲ ಎಂಬ ಸ್ಫೂರ್ತಿದಾಯಕ ಸಂದೇಶ ಸಾರಿದ್ದಾರೆ.

ಗಂಗೊಳ್ಳಿ ನಿವಾಸಿ 76 ವರ್ಷದ ಜೆನ್ನಿ ಡಿಸೋಜ ಹಠಾತ್ ತಲೆ ಸುತ್ತು ಕಾಣಿಸಿಕೊಂಡು ಕೆಲವೇ ಗಂಟೆಗಳಲ್ಲಿ ಪ್ರಜ್ಞಾಹೀನ ಸ್ಥಿತಿಗೆ ತಲುಪಿದ ಹಿನ್ನೆಲೆಯಲ್ಲಿ ಅವರನ್ನು ತುರ್ತಾಗಿ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೈದ್ಯಕೀಯ ಪರೀಕ್ಷೆಗಳಲ್ಲಿ ಅವರಿಗೆ ಮೆದುಳಿನಲ್ಲಿ ತೀವ್ರ ರಕ್ತಸ್ರಾವ ಆಗಿರುವುದು ದೃಢಪಟ್ಟಿತು.

ವೈದ್ಯರ ತಂಡವು ಅವರನ್ನು ಉಳಿಸಲು ಎಲ್ಲ ಚಿಕಿತ್ಸಾ ಪ್ರಯತ್ನಗಳನ್ನು ನಡೆಸಿದರೂ ಫಲಕಾರಿಯಾಗಲಿಲ್ಲ. ನಿಗದಿತ ವೈದ್ಯಕೀಯ ಮಾರ್ಗಸೂಚಿಗಳು ಮತ್ತು ಪ್ರೊಟೋಕಾಲ್ ಪ್ರಕಾರ ನಡೆಸಲಾದ ಎಲ್ಲ ಪರೀಕ್ಷೆಗಳ ಬಳಿಕ ಅವರನ್ನು ಮೆದುಳು ನಿಷ್ಕ್ರಿಯಗೊಂಡ ರೋಗಿ ಎಂದು ಅಧಿಕೃತವಾಗಿ ಪ್ರಮಾಣೀಕರಿಸಲಾಯಿತು.

ದುಃಖದ ನಡುವೆ ಜೆನ್ನಿ ಡಿಸೋಜ ಅವರ ಕುಟುಂಬವು ಮಾನವೀಯ ಮತ್ತು ಸ್ಫೂರ್ತಿದಾಯಕ ನಿರ್ಧಾರ ಕೈಗೊಂಡು, ಅವರ ಯಕೃತ್(ಲಿವರ್), ಕಣ್ಣು, ಚರ್ಮ ಮೊದಲಾದ ಅಂಗಾಂಗಗಳನ್ನು ದಾನ ಮಾಡಲು ಒಪ್ಪಿಗೆ ನೀಡಿತು. ಈ ಅಂಗಾಂಗ ದಾನ ಪ್ರಕ್ರಿಯೆ ಕರ್ನಾಟಕ ಸರಕಾರದ ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ ಜೀವಸಾರ್ಥಕತೆಯ ಸಹಯೋಗದೊಂದಿಗೆ ಯಶಸ್ವಿಯಾಗಿ ನೆರವೇರಿತು. ಅಂಗಾಂಗ ದಾನಕ್ಕೆ ಸಮ್ಮತಿ ನೀಡಿ ಮಾನವೀಯತೆ ಮೆರೆದ ಕುಟುಂಬಕ್ಕೆ ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆ ಗಳ ಮುಖ್ಯ ನಿರ್ವಹಣಾ ಅಧಿಕಾರಿ ಡಾ. ಸುಧಾಕರ್ ಕಂಟಿಪುಡಿ ಕೃತಜ್ಞತೆ ಸಲ್ಲಿಸಿ ದ್ದಾರೆ. ಅಂಗಾಂಗ ದಾನ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನೆರವೇರಿಸಲು ಶ್ರಮಿಸಿದ ವೈದ್ಯಕೀಯ ತಂಡ, ಅಂಗಾಂಗ ಕಸಿ ಸಂಯೋಜಕರು, ಸಂಬಂಧಿತ ಸಿಬ್ಬಂದಿಯ ಸೇವೆಯನ್ನು ಆಸ್ಪತ್ರೆ ಪ್ರಶಂಸಿಸಿದೆ.

**INDIAN EXPRESS**

ness an[redacted] brain haemor-
e. Desp[redacted] brain dead.

# 76-year-old brain-dead woman's organs donated



**EXPRESS NEWS SERVICE** @ Udupi

A 76-year-old woman, Jenny D'Souza from Udupi, gave a new lease of life to many by donating her organs.

Jenny D'Souza, a homemaker from the town of Gangolli, breathed her last at Kasturba Hospital in Manipal recently. Her family chose to donate her organs.

She was brought to the hospital after a sudden spell of dizziness and fell unconscious following a brain haemorrhage. Despite every effort, she was declared brain dead.

In the very hour their hearts were breaking, they decided to give a new lease of life to many. Her liver will give a fresh chance at life to a patient in liver failure, her eyes will restore sight to someone who has known only darkness, and her skin will heal those scarred by burns.

The donation was carried out in coordination with Jeevasarthakathe, Karnataka's State Organ and Tissue Transplant Organisation.

Speaking on the occasion, Dr Sudhakar Kantipudi, Chief Operating Officer, MAHE Teaching Hospitals, said, "We often think of organ donation as something meant for the young. This family, whose loved one was seventy-six, has taught us otherwise. In the darkest hour of their lives, they chose to give life to others. Age is not a barrier to compassion or to donation. Let her memory be the reason a hundred more families say yes."

THE HINDU

Wednesday, July 8, 2026
MANGALURU

# Organs of Gangolli-based woman donated

The Hindu Bureau
MANGALURU

The liver, cornea, and skin of a 76-year-old brain-dead woman from Gangolli in Udupi district were donated on Monday.

The liver was transplanted into a needy patient at Kasturba Hospital in Manipal, while the cornea and skin were sent to the cornea and skin banks in Mangaluru.

In a press release, the hospital said Jenny D'Souza was brought to the hospital after loss of consciousness, caused by massive bleeding in the brain. Despite efforts to help her, the woman was unable to regain consciousness. The hospital then declared her brain dead. As her family agreed to donate her organs, the hospital alerted the State Organ and Tissue Transplant Organisation, Jeevasarthakathe, which initiated the process of the removal of organs. The hospital coordinated with the Jeevasarthakathe team members in the extraction and transplantation.

THE TIMES OF INDIA, MANGALURU
WEDNESDAY, JULY 8, 2026

# 76-year-old woman gifts life through organ donation

TIMES NEWS NETWORK

**Udupi:** The family of 76-year-old woman from Gangolli donated her organs on Monday, after she was declared brain dead at Kasturba Hospital, Manipal. Her liver, eyes and skin were retrieved for transplantation, giving a new lease of life to patients in need, despite her advanced age.

Jenny D' Souza, homemaker from Gangolli, breathed her last at Kasturba Hospital in Manipal, and her family chose to donate her organs. She had been brought to the hospital after a sudden spell of giddiness that turned within hours into a loss of consciousness, caused by a massive bleed in the brain. Despite every effort, she was certified brain dead. The donation was carried out in coordination with Jeevasarthakathe, Karnataka's state organ and tissue transplant organisation.

Dr Sudhakar Kantipudi, COO, MAHE Teaching Hospitals, said, "We often think of organ donation as something meant for the young. Age is not a barrier to compassion or to donation. Let her memory be the reason a hundred more families say yes." The hospital placed on record its profound gratitude to the family for their courage and compassion at a time of unimaginable loss.

**TULUNADU VARTHE**

**LINK:** https://tulunaduvarthe.com/organ-donation-at-age-76-at-kasturba-hospital-manipal-a-woman-proves-that-age-is-never-a-barrier-to-saving-lives/

ಮಣಿಪಾಲ

# ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ 76ನೇ ವಯಸ್ಸಿನಲ್ಲಿ ಅಂಗಾಂಗ ದಾನ: ಜೀವ ಉಳಿಸಲು ವಯಸ್ಸು ಎಂದಿಗೂ ಅಡ್ಡಿಯಲ್ಲ ಎಂಬುದನ್ನು ಸಾಬೀತುಪಡಿಸಿದ ಮಹಿಳೆ

By **TNVOffice** - July 7, 2026 0




**ಮಣಿಪಾಲ :** ಅಂಗಾಂಗ ದಾನವು ಯುವಜನರಿಗೆ ಮಾತ್ರ ಸೀಮಿತ ಎಂಬುದು ಸಮಾಜದಲ್ಲಿರುವ ಸಾಮಾನ್ಯ ಕಲ್ಪನೆ. ಆದರೆ ಕರಾವಳಿ ಕರ್ನಾಟಕದ 76 ವರ್ಷದ ಮಹಿಳೆಯೊಬ್ಬರು ಆ ನಂಬಿಕೆಯನ್ನು ಸುಳ್ಳೆಂದು ಸಾಬೀತುಪಡಿಸಿ, ಜೀವ ಉಳಿಸಲು ವಯಸ್ಸು ಎಂದಿಗೂ ಅಡ್ಡಿಯಲ್ಲ ಎಂಬ ಸ್ಫೂರ್ತಿದಾಯಕ ಸಂದೇಶವನ್ನು ಸಾರಿದ್ದಾರೆ.

ಗಂಗೊಳ್ಳಿಯ ನಿವಾಸಿಯಾಗಿದ್ದ 76 ವರ್ಷದ ಜೆನ್ನಿ ಡಿ'ಸೋಜಾ ಅವರು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ನಿಧನರಾದ ಬಳಿಕ, ಅವರ ಕುಟುಂಬವು ಅತ್ಯಂತ ಮಾನವೀಯ ಹಾಗೂ ಮಾದರಿಯಾದ ನಿರ್ಧಾರ ಕೈಗೊಂಡು ಅವರ ಅಂಗಾಂಗಗಳನ್ನು ದಾನ ಮಾಡಲು ಒಪ್ಪಿಗೆ ನೀಡಿತು. ಈ ಮೂಲಕ ಅವರ ಕುಟುಂಬವು ಅವರ ವಯಸ್ಸಿನ ಕೆಲವು ಕುಟುಂಬಗಳು ಊಹಿಸದ ಕೆಲಸವನ್ನು ಮಾಡಿದೆ.

ಹಠಾತ್ ತಲೆಸುತ್ತು ಕಾಣಿಸಿಕೊಂಡು ಕೆಲವೇ ಗಂಟೆಗಳಲ್ಲಿ ಅವರು ಪ್ರಜ್ಞಾಹೀನ ಸ್ಥಿತಿಗೆ ತಲುಪಿದ ಹಿನ್ನೆಲೆಯಲ್ಲಿ ಅವರನ್ನು ತುರ್ತಾಗಿ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಗೆ ದಾಖಲಿಸಲಾಯಿತು. ವೈದ್ಯಕೀಯ ಪರೀಕ್ಷೆಗಳಲ್ಲಿ ಅವರಿಗೆ ಮೆದುಳಿನಲ್ಲಿ ತೀವ್ರ ರಕ್ತಸ್ರಾವ ಆಗಿರುವುದು ದೃಢಪಟ್ಟಿತು. ವೈದ್ಯರ ತಂಡವು ಅವರನ್ನು ಉಳಿಸಲು ಎಲ್ಲ ರೀತಿಯ ಚಿಕಿತ್ಸಾ ಪ್ರಯತ್ನಗಳನ್ನು ನಡೆಸಿದರೂ ಫಲಕಾರಿಯಾಗಲಿಲ್ಲ. ನಿಗದಿತ ವೈದ್ಯಕೀಯ ಮಾರ್ಗಸೂಚಿಗಳು ಮತ್ತು ಪ್ರೋಟೋಕಾಲ್‌ಗಳಂತೆ ನಡೆಸಲಾದ ಎಲ್ಲ ಪರೀಕ್ಷೆಗಳ ಬಳಿಕ, ಅವರನ್ನು ಮೆದುಳು ನಿಷ್ಕ್ರಿಯಗೊಂಡ (Brain Dead) ರೋಗಿ ಎಂದು ಅಧಿಕೃತವಾಗಿ ಪ್ರಮಾಣೀಕರಿಸಲಾಯಿತು.

**KUNDAPURA.COM**

**LINK:** https://kundapraa.com/?p=99410

ಉಡುಪಿ ಜಿಲ್ಲೆ

# ಮೆದುಳು ನಿಷ್ಕ್ರಿಯಗೊಂಡ 76ನೇ ವಯಸ್ಸಿನ ಗಂಗೊಳ್ಳಿಯ ಮಹಿಳೆಯ ಅಂಗಾಂಗ ದಾನ, ಸಾವಿನಲ್ಲೂ ಸಾರ್ಥಕತೆ

UPDATED: 07/07/2026 NO COMMENTS

Facebook | Twitter | Pinterest




**ಉಡುಪಿ,ಜು.07:** ಅಂಗಾಂಗ ದಾನವು ಯುವಜನರಿಗೆ ಮಾತ್ರ ಸೀಮಿತ ಎಂಬುದು ಸಮಾಜದಲ್ಲಿರುವ ಸಾಮಾನ್ಯ ಕಲ್ಪನೆ. ಆದರೆ ಕರಾವಳಿ ಕರ್ನಾಟಕದ 76 ವರ್ಷದ ಮಹಿಳೆಯೊಬ್ಬರು ಆ ನಂಬಿಕೆಯನ್ನು ಸುಳ್ಳೆಂದು ಸಾಬೀತುಪಡಿಸಿ, ಜೀವ ಉಳಿಸಲು ವಯಸ್ಸು ಎಂದಿಗೂ ಅಡ್ಡಿಯಲ್ಲ ಎಂಬ ಸ್ಫೂರ್ತಿದಾಯಕ ಸಂದೇಶವನ್ನು ಸಾರಿದ್ದಾರೆ.

ಗಂಗೊಳ್ಳಿಯ ನಿವಾಸಿಯಾಗಿದ್ದ 76 ವರ್ಷದ ಜೆನ್ನಿ ಡಿ'ಸೋಜಾ ಎಂಬುವವರು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ನಿಧನರಾದ ಬಳಿಕ, ಅವರ ಕುಟುಂಬವು ಅತ್ಯಂತ ಮಾನವೀಯ ಹಾಗೂ ಮಾದರಿಯಾದ ನಿರ್ಧಾರ ಕೈಗೊಂಡು ಅವರ ಅಂಗಾಂಗಗಳನ್ನು ದಾನ ಮಾಡಲು ಒಪ್ಪಿಗೆ ನೀಡಿತು.
ಹಠಾತ್ ತಲೆಸುತ್ತು ಕಾಣಿಸಿಕೊಂಡು ಕೆಲವೇ ಗಂಟೆಗಳಲ್ಲಿ ಅವರು ಪ್ರಜ್ಞಾಹೀನ ಸ್ಥಿತಿಗೆ ತಲುಪಿದ ಹಿನ್ನೆಲೆಯಲ್ಲಿ ಅವರನ್ನು ತುರ್ತಾಗಿ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಗೆ ದಾಖಲಿಸಲಾಯಿತು. ವೈದ್ಯಕೀಯ ಪರೀಕ್ಷೆಗಳಲ್ಲಿ ಅವರಿಗೆ ಮೆದುಳಿನಲ್ಲಿ ತೀವ್ರ ರಕ್ತಸ್ರಾವ ಆಗಿರುವುದು ದೃಢಪಟ್ಟಿತು. ವೈದ್ಯರ ತಂಡವು ಅವರನ್ನು ಉಳಿಸಲು ಎಲ್ಲ ರೀತಿಯ ಚಿಕಿತ್ಸಾ ಪ್ರಯತ್ನಗಳನ್ನು ನಡೆಸಿದರೂ ಫಲಕಾರಿಯಾಗಲಿಲ್ಲ. ನಿಗದಿತ ವೈದ್ಯಕೀಯ ಮಾರ್ಗಸೂಚಿಗಳು ಮತ್ತು ಪ್ರೋಟೋಕಾಲ್‌ಗಳಂತೆ ನಡೆಸಲಾದ ಎಲ್ಲ ಪರೀಕ್ಷೆಗಳ ಬಳಿಕ, ಅವರನ್ನು ಮೆದುಳು ನಿಷ್ಕ್ರಿಯಗೊಂಡ (Brain Dead) ರೋಗಿ ಎಂದು ಅಧಿಕೃತವಾಗಿ ಪ್ರಮಾಣೀಕರಿಸಲಾಯಿತು.

**KARAVALI TIMES**

**LINK:** https://www.karavalitimes.news/2026/07/ud-76.html?m=1



ಕರಾವಳಿ

# ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ 76ನೇ ವಯಸ್ಸಿನಲ್ಲಿ ಅಂಗಾಂಗ ದಾನ ಮಾಡಿದ ಮಹಿಳೆ !

7/07/2026 04:40:00 PM



ಮಣಿಪಾಲ, ಜುಲೈ 07, 2026: ಅಂಗಾಂಗ ದಾನವು ಯುವಜನರಿಗೆ ಮಾತ್ರ ಸೀಮಿತ ಎಂಬುದು ಸಮಾಜದಲ್ಲಿರುವ ಸಾಮಾನ್ಯ ಕಲ್ಪನೆ. ಆದರೆ ಕರಾವಳಿ ಕರ್ನಾಟಕದ 76 ವರ್ಷದ ಮಹಿಳೆಯೊಬ್ಬರು ಆ ನಂಬಿಕೆಯನ್ನು ಸುಳ್ಳೆಂದು ಸಾಬೀತುಪಡಿಸಿ, ಜೀವ ಉಳಿಸಲು ವಯಸ್ಸು ಎಂದಿಗೂ ಅಡ್ಡಿಯಲ್ಲ ಎಂಬ ಸ್ಫೂರ್ತಿದಾಯಕ ಸಂದೇಶವನ್ನು ಸಾರಿದ್ದಾರೆ.

ಗಂಗೊಳ್ಳಿಯ ನಿವಾಸಿಯಾಗಿದ್ದ 76 ವರ್ಷದ ಶ್ರೀಮತಿ ಜೆನ್ನಿ ಡಿ'ಸೋಜಾ ಅವರು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ನಿಧನರಾದ ಬಳಿಕ, ಅವರ ಕುಟುಂಬವು ಅತ್ಯಂತ ಮಾನವೀಯ ಹಾಗೂ ಮಾದರಿಯಾದ ನಿರ್ಧಾರ ಕೈಗೊಂಡು ಅವರ ಅಂಗಾಂಗಗಳನ್ನು ದಾನ ಮಾಡಲು ಒಪ್ಪಿಗೆ ನೀಡಿತು. ಈ ಮೂಲಕ ಅವರ ಕುಟುಂಬವು ಅವರ ವಯಸ್ಸಿನ ಕೆಲವು ಕುಟುಂಬಗಳು ಊಹಿಸದ ಕೆಲಸವನ್ನು ಮಾಡಿದೆ. ಹಠಾತ್ ತಲೆಸುತ್ತು ಕಾಣಿಸಿಕೊಂಡು ಕೆಲವೇ ಗಂಟೆಗಳಲ್ಲಿ ಅವರು ಪ್ರಜ್ಞಾಹೀನ ಸ್ಥಿತಿಗೆ ತಲುಪಿದ ಹಿನ್ನೆಲೆಯಲ್ಲಿ ಅವರನ್ನು ತುರ್ತಾಗಿ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಗೆ ದಾಖಲಿಸಲಾಯಿತು. ವೈದ್ಯಕೀಯ ಪರೀಕ್ಷೆಗಳಲ್ಲಿ ಅವರಿಗೆ ಮೆದುಳಿನಲ್ಲಿ ತೀವ್ರ ರಕ್ತಸ್ರಾವ ಆಗಿರುವುದು ದೃಢಪಟ್ಟಿತು. ವೈದ್ಯರ ತಂಡವು ಅವರನ್ನು ಉಳಿಸಲು ಎಲ್ಲ ರೀತಿಯ ಚಿಕಿತ್ಸಾ ಪ್ರಯತ್ನಗಳನ್ನು ನಡೆಸಿದರೂ ಫಲಕಾರಿಯಾಗಲಿಲ್ಲ. ನಿಗದಿತ ವೈದ್ಯಕೀಯ ಮಾರ್ಗಸೂಚಿಗಳು ಮತ್ತು ಪ್ರೋಟೋಕಾಲ್‌ಗಳಂತೆ ನಡೆಸಲಾದ ಎಲ್ಲ ಪರೀಕ್ಷೆಗಳ ಬಳಿಕ, ಅವರನ್ನು ಮೆದುಳು ನಿಷ್ಕ್ರಿಯಗೊಂಡ (Brain Dead) ರೋಗಿ ಎಂದು ಅಧಿಕೃತವಾಗಿ ಪ್ರಮಾಣೀಕರಿಸಲಾಯಿತು.

**MAADYAMA BIMBA NEWS**

**LINK:** https://maadhyamabimbanews.com/?p=20112

# ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ 76ನೇ ವಯಸ್ಸಿನಲ್ಲಿ ಅಂಗಾಂಗ ದಾನ: ಜೀವ ಉಳಿಸಲು ವಯಸ್ಸು ಎಂದಿಗೂ ಅಡ್ಡಿಯಲ್ಲ ಎಂಬುದನ್ನು ಸಾಬೀತುಪಡಿಸಿದ ಮಹಿಳೆ

by Madhyama Bimba July 7, 2026 0 156

SHARE 0




Post Views:

ಅಂಗಾಂಗ ದಾನವು ಯುವಜನರಿಗೆ ಮಾತ್ರ ಸೀಮಿತ ಎಂಬುದು ಸಮಾಜದಲ್ಲಿರುವ ಸಾಮಾನ್ಯ ಕಲ್ಪನೆ. ಆದರೆ ಕರಾವಳಿ ಕರ್ನಾಟಕದ 76 ವರ್ಷದ ಮಹಿಳೆಯೊಬ್ಬರು ಆ ನಂಬಿಕೆಯನ್ನು ಸುಳ್ಳೆಂದು ಸಾಬೀತುಪಡಿಸಿ, ಜೀವ ಉಳಿಸಲು ವಯಸ್ಸು ಎಂದಿಗೂ ಅಡ್ಡಿಯಲ್ಲ ಎಂಬ ಸ್ಫೂರ್ತಿದಾಯಕ ಸಂದೇಶವನ್ನು ಸಾರಿದ್ದಾರೆ.

ಗಂಗೊಳ್ಳಿಯ ನಿವಾಸಿಯಾಗಿದ್ದ 76 ವರ್ಷದ ಶ್ರೀಮತಿ ಜೆನ್ನಿ ಡಿ'ಸೋಜಾ ಅವರು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ನಿಧನರಾದ ಬಳಿಕ, ಅವರ ಕುಟುಂಬವು ಅತ್ಯಂತ ಮಾನವೀಯ ಹಾಗೂ ಮಾದರಿಯಾದ ನಿರ್ಧಾರ ಕೈಗೊಂಡು ಅವರ ಅಂಗಾಂಗಗಳನ್ನು ದಾನ ಮಾಡಲು ಒಪ್ಪಿಗೆ ನೀಡಿತು. ಈ ಮೂಲಕ ಅವರ ಕುಟುಂಬವು ಅವರ ವಯಸ್ಸಿನ ಕೆಲವು ಕುಟುಂಬಗಳು ಊಹಿಸದ ಕೆಲಸವನ್ನು ಮಾಡಿದೆ. ಹಠಾತ್ ತಲೆಸುತ್ತು ಕಾಣಿಸಿಕೊಂಡು ಕೆಲವೇ ಗಂಟೆಗಳಲ್ಲಿ ಅವರು ಪ್ರಜ್ಞಾಹೀನ ಸ್ಥಿತಿಗೆ ತಲುಪಿದ ಹಿನ್ನಲೆಯಲ್ಲಿ ಅವರನ್ನು ತುರ್ತಾಗಿ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಗೆ ದಾಖಲಿಸಲಾಯಿತು. ವೈದ್ಯಕೀಯ ಪರೀಕ್ಷೆಗಳಲ್ಲಿ ಅವರಿಗೆ ಮೆದುಳಿನಲ್ಲಿ ತೀವ್ರ ರಕ್ತಸ್ರಾವ ಆಗಿರುವುದು ದೃಢಪಟ್ಟಿತು. ವೈದ್ಯರ ತಂಡವು ಅವರನ್ನು ಉಳಿಸಲು ಎಲ್ಲ ರೀತಿಯ ಚಿಕಿತ್ಸಾ ಪ್ರಯತ್ನಗಳನ್ನು ನಡೆಸಿದರೂ ಫಲಕಾರಿಯಾಗಲಿಲ್ಲ. ನಿಗದಿತ ವೈದ್ಯಕೀಯ ಮಾರ್ಗಸೂಚಿಗಳು ಮತ್ತು ಪ್ರೋಟೋಕಾಲ್‌ಗಳಂತೆ ನಡೆಸಲಾದ ಎಲ್ಲ ಪರೀಕ್ಷೆಗಳ ಬಳಿಕ, ಅವರನ್ನು ಮೆದುಳು ನಿಷ್ಕ್ರಿಯಗೊಂಡ (Brain Dead) ರೋಗಿ ಎಂದು ಅಧಿಕೃತವಾಗಿ

**UDAYAVANI.COM**

**LINK:** https://uvnews.in/z9g6l8j

KARNATAKA JUL 7, 2026, 5:46 PM IST

## KMC: Organ donation by a 76-year-old woman at Kasturba Hospital, Manipal

She proved that age is never a barrier to saving a life




TEAM UDAYAVANI

Share

Manipal: Many believe that organ donation is only for the young. A 76-year-old woman Mrs Jenny D' Souza from coastal Karnataka has shown an entire community how wrong that belief can be.

When this 76-year-old Mrs Jenny D' Souza homemaker from the quiet coastal town of Gangolli breathed her last at Kasturba Hospital in Manipal, her family did something few families her age ever imagine possible. They chose to donate her organs. She had been brought to the hospital after a sudden spell of giddiness that turned within hours into a loss of consciousness, caused by a massive bleed in the brain. Despite every effort, she was certified brain dead, gently and correctly, as the protocol demands.

It was then, in the very hour their hearts were breaking, that her family made a choice of extraordinary grace. They looked past their grief and asked a question too few families think to ask: could she still help someone? The answer was yes. Age was no barrier. And so, at 76, she became a donor. Her liver will give a fresh chance at life to a patient in liver failure, her eyes will restore sight to someone who has known only darkness, and her skin will heal those scarred by burns.

**DAIJIWORLD.COM**

**LINK:** https://www.daijiworld.com/news/newsDisplay?newsID=1319352

# At 76, Gangolli woman shatters age myths with organ donation at Kasturba Hospital, Manipal

Tue, Jul 07 2026 06:18:06 PM




*Media Release*

**Udupi, July 7:** Many believe organ donation is only for the young. A 76-year-old woman from coastal Karnataka has shown an entire community just how wrong that belief is.

When 76-year-old Jenny D' Souza, a homemaker from the quiet coastal town of Gangolli, breathed her last at Kasturba Hospital, Manipal, her family did something few families ever imagine possible at that age. They chose to donate her organs.

She had been brought to the hospital after a sudden spell of giddiness that, within hours, progressed to loss of consciousness due to a massive brain haemorrhage. Despite every effort by the medical team, she was certified brain dead in accordance with established medical protocols.



**KEMMANNU.COM**

**LINK:** https://share.google/XQF3QbxsGzcib4bXp

Manipal, 07 July 2026: Many believe that organ donation is only for the young. A 76-year-old woman Mrs Jenny D' Souza from coastal Karnataka has shown an entire community how wrong that belief can be.




When this 76-year-old Mrs Jenny D' Souza homemaker from the quiet coastal town of Gangolli breathed her last at Kasturba Hospital in Manipal, her family did something few families her age ever imagine possible. They chose to donate her organs. She had been brought to the hospital after a sudden spell of giddiness that turned within hours into a loss of consciousness, caused by a massive bleed in the brain. Despite every effort, she was certified brain dead, gently and correctly, as the protocol demands.

It was then, in the very hour their hearts were breaking, that her family made a choice of extraordinary grace. They looked past their grief and asked a question too few families think to ask: could she still help someone? The answer was yes. Age was no barrier. And so, at 76, she became a donor. Her liver will give a fresh chance at life to a patient in liver failure, her eyes will restore sight to someone who has known only darkness, and her skin will heal those scarred by burns.

**RB NEWS**

**LINK:** https://rbnewskannada.in/ಮಣಿಪಾಲದ-ಕಸ್ತೂರ್ಬಾ-ಆಸ್ಪತ್ರೆ-4/

[t4b-ticker]

# ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ 76ನೇ ವಯಸ್ಸಿನಲ್ಲಿ ಅಂಗಾಂಗ ದಾನ

RB NEWS
Bureau Report




ಮಣಿಪಾಲ : ಅಂಗಾಂಗ ದಾನವು ಯುವಜನರಿಗೆ ಮಾತ್ರ ಸೀಮಿತ ಎಂಬುದು ಸಮಾಜದಲ್ಲಿರುವ ಸಾಮಾನ್ಯ ಕಲ್ಪನೆ. ಆದರೆ ಕರಾವಳಿ ಕರ್ನಾಟಕದ 76 ವರ್ಷದ ಮಹಿಳೆಯೊಬ್ಬರು ಆ ನಂಬಿಕೆಯನ್ನು ಸುಳ್ಳೆಂದು ಸಾಬೀತುಪಡಿಸಿ, ಜೀವ ಉಳಿಸಲು ವಯಸ್ಸು ಎಂದಿಗೂ ಅಡ್ಡಿಯಲ್ಲ ಎಂಬ ಸ್ಫೂರ್ತಿದಾಯಕ ಸಂದೇಶವನ್ನು ಸಾರಿದ್ದಾರೆ.
ಗಂಗೊಳ್ಳಿಯ ನಿವಾಸಿ ಜೆನ್ನಿ ಡಿ'ಸೋಜಾ (76) ಅವರು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ನಿಧನರಾದ ಬಳಿಕ, ಅವರ ಕುಟುಂಬವು ಅತ್ಯಂತ ಮಾನವೀಯ ಹಾಗೂ ಮಾದರಿಯಾದ ನಿರ್ಧಾರ ಕೈಗೊಂಡು ಅವರ ಅಂಗಾಂಗಗಳನ್ನು ದಾನ ಮಾಡಲು ಒಪ್ಪಿಗೆ ನೀಡಿತು. ಈ ಮೂಲಕ ಅವರ ಕುಟುಂಬವು ಅವರ ವಯಸ್ಸಿನ ಕೆಲವು ಕುಟುಂಬಗಳು ಊಹಿಸದ ಕೆಲಸವನ್ನು ಮಾಡಿದೆ. ಹಠಾತ್ ತಲೆಸುತ್ತು ಕಾಣಿಸಿಕೊಂಡು ಕೆಲವೇ ಗಂಟೆಗಳಲ್ಲಿ ಅವರು ಪ್ರಜ್ಞಾಹೀನ ಸ್ಥಿತಿಗೆ ತಲುಪಿದ ಹಿನ್ನೆಲೆಯಲ್ಲಿ ಅವರನ್ನು ತುರ್ತಾಗಿ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಗೆ ದಾಖಲಿಸಲಾಯಿತು. ವೈದ್ಯಕೀಯ ಪರೀಕ್ಷೆಗಳಲ್ಲಿ ಅವರಿಗೆ ಮೆದುಳಿನಲ್ಲಿ ತೀವ್ರ ರಕ್ತಸ್ರಾವ ಆಗಿರುವುದು ದೃಢಪಟ್ಟಿತು. ವೈದ್ಯರ ತಂಡವು ಅವರನ್ನು ಉಳಿಸಲು ಎಲ್ಲ ರೀತಿಯ ಚಿಕಿತ್ಸಾ ಪ್ರಯತ್ನಗಳನ್ನು ನಡೆಸಿದರೂ ಫಲಕಾರಿಯಾಗಲಿಲ್ಲ. ನಿಗದಿತ ವೈದ್ಯಕೀಯ ಮಾರ್ಗಸೂಚಿಗಳು ಮತ್ತು ಪ್ರೋಟೋಕಾಲ್‌ಗಳಂತೆ ನಡೆಸಲಾದ ಎಲ್ಲ ಪರೀಕ್ಷೆಗಳ ಬಳಿಕ, ಅವರನ್ನು ಮೆದುಳು ನಿಷ್ಕ್ರಿಯಗೊಂಡ (Brain Dead) ರೋಗಿ ಎಂದು ಅಧಿಕೃತವಾಗಿ ಪ್ರಮಾಣೀಕರಿಸಲಾಯಿತು.

**DHRISHYA NEWS**

**LINK:** https://www.dhrishyanews.com/?p=36440

# ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ 76ನೇ ವಯಸ್ಸಿನಲ್ಲಿ ಅಂಗಾಂಗ ದಾನ: ಜೀವ ಉಳಿಸಲು ವಯಸ್ಸು ಎಂದಿಗೂ ಅಡ್ಡಿಯಲ್ಲ ಎಂಬುದನ್ನು ಸಾಬೀತುಪಡಿಸಿದ ಮಹಿಳೆ

by Dhrishya News — 08/07/2026 in ಸುದ್ದಿಗಳು 0




0 SHARES 18 VIEWS

ಮಣಿಪಾಲ, ಜುಲೈ 07, 2026: ಅಂಗಾಂಗ ದಾನವು ಯುವಜನರಿಗೆ ಮಾತ್ರ ಸೀಮಿತ ಎಂಬುದು ಸಮಾಜದಲ್ಲಿರುವ ಸಾಮಾನ್ಯ ಕಲ್ಪನೆ. ಆದರೆ ಕರಾವಳಿ ಕರ್ನಾಟಕದ 76 ವರ್ಷದ ಮಹಿಳೆಯೊಬ್ಬರು ಆ ನಂಬಿಕೆಯನ್ನು ಸುಳ್ಳೆಂದು ಸಾಬೀತುಪಡಿಸಿ, ಜೀವ ಉಳಿಸಲು ವಯಸ್ಸು ಎಂದಿಗೂ ಅಡ್ಡಿಯಲ್ಲ ಎಂಬ ಸ್ಫೂರ್ತಿದಾಯಕ ಸಂದೇಶವನ್ನು ಸಾರಿದ್ದಾರೆ.

ಗಂಗೊಳ್ಳಿಯ ನಿವಾಸಿಯಾಗಿದ್ದ 76 ವರ್ಷದ ಶ್ರೀಮತಿ ಜೆನ್ನಿ ಡಿ'ಸೋಜಾ ಅವರು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ನಿಧನರಾದ ಬಳಿಕ, ಅವರ ಕುಟುಂಬವು ಅತ್ಯಂತ ಮಾನವೀಯ ಹಾಗೂ ಮಾದರಿಯಾದ ನಿರ್ಧಾರ ಕೈಗೊಂಡು ಅವರ ಅಂಗಾಂಗಗಳನ್ನು ದಾನ ಮಾಡಲು ಒಪ್ಪಿಗೆ ನೀಡಿತು. ಈ ಮೂಲಕ ಅವರ ಕುಟುಂಬವು ಅವರ ವಯಸ್ಸಿನ ಕೆಲವು ಕುಟುಂಬಗಳು ಊಹಿಸದ ಕೆಲಸವನ್ನು ಮಾಡಿದೆ. ಹಠಾತ್ ತಲೆಸುತ್ತು ಕಾಣಿಸಿಕೊಂಡು ಕೆಲವೇ ಗಂಟೆಗಳಲ್ಲಿ ಅವರು ಪ್ರಜ್ಞಾಹೀನ ಸ್ಥಿತಿಗೆ ತಲುಪಿದ ಹಿನ್ನೆಲೆಯಲ್ಲಿ ಅವರನ್ನು ತುರ್ತಾಗಿ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಗೆ ದಾಖಲಿಸಲಾಯಿತು. ವೈದ್ಯಕೀಯ ಪರೀಕ್ಷೆಗಳಲ್ಲಿ ಅವರಿಗೆ ಮೆದುಳಿನಲ್ಲಿ ತೀವ್ರ ರಕ್ತಸ್ರಾವ ಆಗಿರುವುದು ದೃಢಪಟ್ಟಿತು. ವೈದ್ಯರ ತಂಡವು ಅವರನ್ನು ಉಳಿಸಲು ಎಲ್ಲ ರೀತಿಯ ಚಿಕಿತ್ಸಾ ಪ್ರಯತ್ನಗಳನ್ನು ನಡೆಸಿದರೂ ಫಲಕಾರಿಯಾಗಲಿಲ್ಲ.

**NP NEWS**

**LINK:** https://npnewz.com/viralnews/manipal-76-year-old-woman-organ-donation-kasturba-hospital/




**ಮಣಿಪಾಲ:** ವಯಸ್ಸು ಕೇವಲ ಒಂದು ಸಂಖ್ಯೆ ಮಾತ್ರ, ಕರುಣೆ ಮತ್ತು ದಾನದ ಗುಣಕ್ಕೆ ವಯಸ್ಸಿನ ಮಿತಿ ಇರುವುದಿಲ್ಲ ಎಂಬುದನ್ನು ಕರಾವಳಿಯ ಕುಟುಂಬವೊಂದು ಜಗತ್ತಿಗೆ ಸಾರಿದೆ. ಮರಣದ ನಂತರವೂ ಇತರರ ಬಾಳಿಗೆ ಬೆಳಕಾಗಬಹುದು ಎಂಬ ಉದಾತ್ತ ಚಿಂತನೆಯನ್ನು 76 ವರ್ಷದ ವೃದ್ಧೆಯೊಬ್ಬರ ಕುಟುಂಬಸ್ಥರು ನಿಜವಾಗಿಸಿದ್ದಾರೆ. ಮೆದುಳು ನಿಷ್ಕ್ರಿಯಗೊಂಡ ಹಿರಿಯ ಜೀವದ ಅಂಗಾಂಗಗಳನ್ನು ದಾನ ಮಾಡುವ ಮೂಲಕ ಸಮಾಜಕ್ಕೆ ಹೊಸ ಸಂದೇಶ ರವಾನಿಸಿದ್ದಾರೆ.

ಉಡುಪಿ ಜಿಲ್ಲೆಯ ಗಂಗೊಳ್ಳಿ ನಿವಾಸಿಯಾಗಿದ್ದ 76 ವರ್ಷದ ಜೆನ್ನಿ ಡಿ'ಸೋಜಾ ಅವರು ಇತ್ತೀಚೆಗೆ ಹಠಾತ್ ಅನಾರೋಗ್ಯಕ್ಕೆ ಒಳಗಾಗಿದ್ದರು. ತೀವ್ರ ತಲೆಸುತ್ತು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ತಕ್ಷಣವೇ ಅವರನ್ನು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಮೆದುಳಿನಲ್ಲಿ ತೀವ್ರ ರಕ್ತಸ್ರಾವ ಉಂಟಾಗಿದ್ದರಿಂದ ಚಿಕಿತ್ಸೆ ಫಲಕಾರಿಯಾಗದೆ ಅವರು ಕೋಮಾ ಸ್ಥಿತಿಗೆ ತಲುಪಿದ್ದರು. ವೈದ್ಯರ ನಿರಂತರ ಪ್ರಯತ್ನದ ಹೊರತಾಗಿಯೂ ಚೇತರಿಕೆ ಕಾಣದ ಅವರನ್ನು ನಿಯಮಾನುಸಾರ 'ಬ್ರೈನ್ ಡೆಡ್' (ಮೆದುಳು ನಿಷ್ಕ್ರಿಯ) ಎಂದು ಘೋಷಿಸಲಾಯಿತು.

ತಮ್ಮ ಪ್ರೀತಿಯ ಸದಸ್ಯರನ್ನು ಕಳೆದುಕೊಂಡ ಆಘಾತದಲ್ಲೂ, ಜೆನ್ನಿ ಅವರ ಕುಟುಂಬದವರು ಧೈರ್ಯ ಹಾಗೂ ಮಾನವೀಯತೆ ಮೆರೆದಿದ್ದಾರೆ. ವೈದ್ಯರ ಸಕಾಲಿಕ ಆಲೋಚನೆಯಂತೆ ಮೃತರ ಅಂಗಾಗಗಳನ್ನು ದಾನ ಮಾಡಲು ಒಪ್ಪಿಗೆ ಸೂಚಿಸಿದರು. ವೃದ್ಧರ ಅಂಗಾಂಗಗಳು ಯಾರಿಗೂ ಪ್ರಯೋಜನಕ್ಕೆ ಬಾರದು ಎನ್ನುವ ಮೂಢನಂಬಿಕೆಯನ್ನು ಬದಿಗಿಟ್ಟು, ಈ ಕುಟುಂಬ ತೆಗೆದುಕೊಂಡ ನಿರ್ಧಾರವು ಇಂದು ಹಲವು ರೋಗಿಗಳ ಜೀವ ಉಳಿಸಲು ಕಾರಣವಾಗಿದೆ.

## ಮುಖ್ಯಾಂಶಗಳು

- **ಮಹಾನ್ ದಾನಿ:** ಗಂಗೊಳ್ಳಿಯ 76 ವರ್ಷದ ಜೆನ್ನಿ ಡಿ'ಸೋಜಾ ಅವರಿಂದ ಅಂಗಾಂಗ ದಾನ.
- **ಆಸ್ಪತ್ರೆ:** ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ನಡೆದ ಯಶಸ್ವಿ ಪ್ರಕ್ರಿಯೆ.
- **ಮರುಜೀವ:** ಲಿವರ್ ವೈಫಲ್ಯದಿಂದ ಬಳಲುತ್ತಿದ್ದ ರೋಗಿಗೆ ಯಕೃತ್ತು ಕಸಿ.
- **ಬೆಳಕು ಮತ್ತು ಚಿಕಿತ್ಸೆ:** ದೃಷ್ಟಿಹೀನರಿಗೆ ನೇತ್ರದಾನ, ಸುಟ್ಟ ಗಾಯದ ರೋಗಿಗಳಿಗೆ ಚರ್ಮದ ಕೊಡುಗೆ.
- **ಸಹಯೋಗ:** ಕರ್ನಾಟಕ ಸರ್ಕಾರದ 'ಜೀವಸಾರ್ಥಕತೆ' ಸಂಸ್ಥೆಯ ಮುಖೇನ ಕಸಿ ಪ್ರಕ್ರಿಯೆ ಪೂರ್ಣ.

**LOKABANDHU NEWS**

**LINK:** https://www.lokabandhunews.in/2026/07/no-age-bar-for-organ-donation-woman.html?m=1



Ad Banner



# ಅಂಗದಾನಕ್ಕೆ ಹರೆಯದ ಹಂಗಿಲ್ಲ: ಮಹಿಳೆ ಸಾಬೀತು

LOKA BANDHU NEWS   Wednesday, July 08, 2026

**ಲೋಕಬಂಧು ನ್ಯೂಸ್ ಮಣಿಪಾಲ, ಜು.8** Time & Calendars
ಜೀವ ಉಳಿಸಲು ವಯಸ್ಸು ಅಡ್ಡಿಯಲ್ಲ ಎಂಬುದನ್ನು ಮಹಿಳೆಯೋರ್ವರು ಸಾಬೀತುಪಡಿಸಿದ್ದು, ಅಂಗಾಂಗ ದಾನ ಯುವ ಜನರಿಗೆ ಮಾತ್ರ ಸೀಮಿತ ಎಂಬ ಸಾಮಾನ್ಯ ಕಲ್ಪನೆಯನ್ನು ಗಂಗೊಳ್ಳಿಯ 76ರ ಹರೆಯದ ಜೆನ್ನಿ ಡಿ'ಸೋಜ ಸುಳ್ಳು ಮಾಡಿ, ಇತರರಿಗೆ ಸ್ಫೂರ್ತಿಯಾಗಿದ್ದಾರೆ.




ಗಂಗೊಳ್ಳಿಯ ಜೆನ್ನಿ ಡಿ'ಸೋಜ ಅವರಿಗೆ ಹಠಾತ್ ತಲೆ ಸುತ್ತು ಕಾಣಿಸಿಕೊಂಡು ಕೆಲವೇ ಗಂಟೆಗಳಲ್ಲಿ ಪ್ರಜ್ಞಾಹೀನ ಸ್ಥಿತಿಗೆ ತಲುಪಿದ ಹಿನ್ನೆಲೆಯಲ್ಲಿ ಅವರನ್ನು ತುರ್ತಾಗಿ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಮೆದುಳಿನಲ್ಲಿ ತೀವ್ರ ರಕ್ತಸ್ರಾವವಾಗಿರುವುದು ವೈದ್ಯಕೀಯ ಪರೀಕ್ಷೆಗಳಿಂದ ದೃಢಪಟ್ಟಿತು.

ಅವರನ್ನು ಉಳಿಸಲು ವೈದ್ಯರ ತಂಡ ಎಲ್ಲಾ ಚಿಕಿತ್ಸಾ ಪ್ರಯತ್ನ ನಡೆಸಿದರೂ ಫಲಕಾರಿಯಾಗಲಿಲ್ಲ. ನಿಗದಿತ ವೈದ್ಯಕೀಯ ಮಾರ್ಗಸೂಚಿಗಳು ಮತ್ತು ಪ್ರೊಟೋಕಾಲ್ ಪ್ರಕಾರ ನಡೆಸಲಾದ ಎಲ್ಲ ಪರೀಕ್ಷೆಗಳ ಬಳಿಕ ಅವರನ್ನು ಮೆದುಳು ನಿಷ್ಕ್ರಿಯಗೊಂಡ ರೋಗಿ ಎಂದು ಅಧಿಕೃತವಾಗಿ ಪ್ರಮಾಣೀಕರಿಸಲಾಯಿತು.